ಸುದ್ದಿ ಸಂಚಯ

# ವ್ಯಕ್ತಿತ್ವ ವಿಕಾಸ

## ಸಂಕ್ಷಿಪ್ತ ವರದಿ



### ಉದ್ದೇಶ

ಆಧುನಿಕತೆಯ ಸೋಗಿನಲ್ಲಿ ಶೀಲಸಂವರ್ಧನ ಮಾರ್ಗದಿಂದ ದೂರ ಸರಿಯುತ್ತ ಸ್ವಚ್ಛಂದ ವೃತ್ತಿಯನ್ನೇ ಸಮರ್ಥಿಸಿಕೊಳ್ಳುವ ಮನೋಭಾವದ ಇಂದಿನ ಯುವಜನಾಂಗಕ್ಕೆ ಅವರ ತಪ್ಪಿನ ಅರಿವನ್ನು ಜಾಗೃತಗೊಳಿಸಿ, ಅವರನ್ನು ಋಜು ಮಾರ್ಗದಲ್ಲಿ ನಡೆಯುವಂತೆ ಮಾಡುವ ಹಲವಾರು ಪ್ರಯತ್ನಗಳು ನಡೆಯುತ್ತಿವೆ. ಮೈಸೂರಿನಲ್ಲಿರುವ ಶ್ರೀರಾಮಕೃಷ್ಣಾಶ್ರಮವೂ ತನ್ನದೇ ಆದ ರೀತಿಯಲ್ಲಿ ಈ ಕಾರ್ಯವನ್ನು ನಡೆಸುತ್ತಿದೆ. ಇದರ ಮುಖ್ಯ ಉದ್ದೇಶ ಸ್ವಾಮಿ ವಿವೇಕಾನಂದರ ಸಂದೇಶವು ಯುವಕರಿಗೆ ತಲುಪುವಂತೆ ಮಾಡಿ ತನ್ಮೂಲಕ ಅವರ ವ್ಯಕ್ತಿತ್ವ ನಿರ್ಮಾಣ ಕಾರ್ಯಕ್ಕೆ ಪ್ರೇರೇಪಿಸುವುದು.

ಸ್ವಾಮಿ ವಿವೇಕಾನಂದರು ಪೌರಸ್ತ್ಯ-ಪಾಶ್ಚಿಮಾತ್ಯ ಸಂಸ್ಕೃತಿಗಳ ಸಂಗಮ. ವಿಶೇಷವಾಗಿ ಯುವಜನಾಂಗಕ್ಕೆ ಅವರ ಮಾರ್ಗದರ್ಶನ ಮೌಲ್ಯಾಧಾರಿತ ಜೀವನಕ್ಕೆ ಬುನಾದಿ. ಬುದ್ಧ, ಸ್ವಾಮಿ ವಿವೇಕಾನಂದ, ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್, ದೇಶಭಕ್ತ ಮಹಾತ್ಮಾ ಗಾಂಧಿ ಮುಂತಾದ ಮಹಾಪುರುಷರ ಜೀವನಾದರ್ಶಗಳ ನಡೆ-ನುಡಿಗಳ ಹಿನ್ನೆಲೆಯನ್ನು ಮುಂದಿಟ್ಟು ಇಂದಿನ ಯುವಜನಾಂಗಕ್ಕೆ ಮೌಲ್ಯಾಧಾರಿತ ಜೀವನದ ಅರಿವನ್ನುಂಟುಮಾಡಿ ತಮ್ಮ ಏಳಿಗೆಗೆ ತಾವೇ ರೂವಾರಿಗಳಾಗುವಂತೆ ಅವರಲ್ಲಿ ಹೊಸ ಚೈತನ್ಯ ತುಂಬುವ ಸಲುವಾಗಿ 'ವ್ಯಕ್ತಿತ್ವ ವಿಕಾಸ'ವೆಂಬ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಸರಳ ಆದರೆ ನಿಶ್ಚಿತ ಗುರಿಯೆಡೆಗೆ ಸಾಗುತ್ತಿರುವ ಈ ಯೋಜನೆ ಒಂದು ಶುಭಾರಂಭ.

### CD ರೂಪ

ದೆಹಲಿಯಲ್ಲಿರುವ ಸರ್ಕಾರಿ ಸ್ವಾಮ್ಯವಲ್ಲದ (*N.G.O*) ಸಂಸ್ಥೆಗಳಾದ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ (NIIT), ಇಂಡಸ್ ಕ್ವಾಲಿಟಿ ಫೌಂಡೇಷನ್ (*I.Q.F*) ಮೈಸೂರು ನಗರದ ಶ್ರೀರಾಮಕೃಷ್ಣಾಶ್ರಮದ ಅಂಗ ಸಂಸ್ಥೆಯಾದ ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆ (*RIMSE*)—ಈ ಸಂಸ್ಥೆಗಳ ಸಹಯೋಗದಲ್ಲಿ ಈ 'ವ್ಯಕ್ತಿತ್ವ ವಿಕಾಸ' ಯೋಜನೆಯನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮವನ್ನು ಸರಳವಾದ-ಬೋಧಪ್ರದವಾದ ರೀತಿಯಲ್ಲಿ ಅಳವಡಿಸಿ, ವಾಕ್, ದೃಶ್ಯ ಮಾಧ್ಯಮದಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸಿಕೊಂಡು CD ರೂಪದಲ್ಲಿ ಸಿದ್ಧಪಡಿಸಲಾಗಿದೆ.*

### ಶಾಲೆಗಳಲ್ಲಿ ಪ್ರದರ್ಶನ

ಈ ಕಾರ್ಯಕ್ರಮವನ್ನು ಮೈಸೂರು ನಗರದ ಪ್ರೌಢ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರದರ್ಶಿಸುವ ಯೋಜನೆ ಹಮ್ಮಿಕೊಳ್ಳಲಾಯಿತು. ಜನ್ಮತಾಳಿ ೨೫ ವಸಂತಗಳನ್ನು ಕಳೆದು ತನ್ನ ರಜತ ಮಹೋತ್ಸವವನ್ನು ಆಚರಿಸುತ್ತಿರುವ ಮೈಸೂರು ನಗರದ ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯು ತನ್ನ ವಿಶೇಷ ಕಾರ್ಯಕ್ರಮಗಳಲ್ಲಿ, 'ವ್ಯಕ್ತಿತ್ವ ವಿಕಾಸ'ದ ಕಾರ್ಯಕ್ರಮವನ್ನೂ ಅಳವಡಿಸಿಕೊಂಡಿದೆ. ೨೦೦೦ರ ಡಿಸೆಂಬರ್ ಮಾಹೆಯ ಅಂತ್ಯದವರೆಗೆ ಈ ಕಾರ್ಯಕ್ರಮದ ಪ್ರದರ್ಶನಗಳಿಗೆ ವೇಳಾಪಟ್ಟಿಯನ್ನು ಹಾಕಿಕೊಳ್ಳಲಾಗಿದೆ.

ಪ್ರಥಮ ಹಂತವಾಗಿ, ಈ 'ವ್ಯಕ್ತಿತ್ವ ವಿಕಾಸ'ದ ಕಾರ್ಯಕ್ರಮವನ್ನು ಮೈಸೂರು ನಗರದ ಶಾಲೆಗಳಲ್ಲಿ ವಿದ್ಯಾರ್ಥಿವೃಂದಕ್ಕೆ ಪ್ರದರ್ಶಿಸುವ ಸಲುವಾಗಿ ಕೆಲವು ಶಾಲೆಗಳ ಮುಖ್ಯಸ್ಥರೊಡನೆ ಸಮಾಲೋಚಿಸಿ ವೇಳಾಪಟ್ಟಿಯನ್ನು ಸಿದ್ಧಗೊಳಿಸಲಾಯಿತು. ಮೊದಲಿಗೆ ಮೇಲೆ ನಿರೂಪಿಸಿದ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಶಾಲೆಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಅದರಂತೆ ಈ ಕಾರ್ಯಕ್ರಮಕ್ಕೆ ಮುಂದಾಗಿ ಉತ್ಸಾಹತೋರಿದ ೧೩ ಶಾಲೆಗಳಲ್ಲಿ ಪ್ರದರ್ಶನಕ್ಕೆ ಸಿದ್ಧವಾಗಿ, ಪ್ರದರ್ಶನವು ಜನವರಿ ಮಾಹೆಯ ೨೫ರಿಂದ ಫೆಬ್ರವರಿ ಮಾಹೆಯ ೨೨ರವರೆಗಿನ ಅಂತರದಲ್ಲಿ ಯಶಸ್ವಿಯಾಗಿ ಜರುಗಿತು. ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದ ಒಂದು ಶಾಲೆಯಲ್ಲಿ ೨ ದಿನಗಳಲ್ಲಿ ೩ ಪ್ರದರ್ಶನಗಳು ನಡೆದವು. ೧೩ ಶಾಲೆಗಳಲ್ಲಿ ಮೊದಲ ೭ ಶಾಲೆಗಳ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರೊಂದಿಗೆ ಆಧ್ಯಾತ್ಮಿಕ ಸಂಸ್ಥೆಗೇ ಬಂದುದರಿಂದ ಸಂಸ್ಥೆಯ ಸಭಾಮಂಟಪದಲ್ಲಿ ಕಾರ್ಯಕ್ರಮ ಜರುಗಿತು. ಉಳಿದ ೬ ಶಾಲೆಗಳಿಗೆ, ಅವರಲ್ಲಿಗೇ ಹೋಗಿ ಕಾರ್ಯಕ್ರಮ ನಡೆಸಿ ಕೊಡಲಾಯಿತು.

ಜನವರಿ ೨೫ರಿಂದ ಜುಲೈ ೧೮ರವರೆಗೆ ನಡೆದ ಒಟ್ಟು ೨೦ ಪ್ರದರ್ಶನಗಳಲ್ಲಿ ೨೦೬೦ ವಿದ್ಯಾರ್ಥಿಗಳು ಮತ್ತು ೩೨೧ ಮಂದಿ ಅಧ್ಯಾಪಕರು ಮತ್ತು ಹಿರಿಯರು ಪಾಲ್ಗೊಂಡರು. ಭಾಗವಹಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಶೇಕಡ ೩೩ ಮಂದಿ (೬೬೦ ಮಂದಿ) ಲಿಖಿತರೂಪದಲ್ಲಿ ತಮ್ಮ ಪ್ರಶ್ನೆಗಳನ್ನು ಕೊಟ್ಟರು. ಮುಖ್ಯವಾಗಿ ಏಕಾಗ್ರತೆ, ಧ್ಯಾನ, ಆತ್ಮಶ್ರದ್ಧೆ, ಭಾವೋದ್ವೇಗಗಳ ನಿಗ್ರಹ—ಇವುಗಳ ಬಗ್ಗೆ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಲಾಯಿತು. ಹಾಗೂ ಪ್ರತಿ ಕಾರ್ಯಕ್ರಮದ ಅಂತ್ಯದಲ್ಲಿ ಪ್ರತಿಶಾಲೆಯ ಇಬ್ಬರು ವಿದ್ಯಾರ್ಥಿ ಪ್ರತಿನಿಧಿಗಳು ಮತ್ತು ಒಬ್ಬರು ಅಧ್ಯಾಪಕರಿಂದ ಕಾರ್ಯಕ್ರಮದ ಬಗ್ಗೆ ಮುಕ್ತ ಅಭಿಪ್ರಾಯ ಪಡೆಯಲಾಯಿತು.

ಇದೇ ಸಂದರ್ಭದಲ್ಲಿ ಈ ಕಾರ್ಯಕ್ರಮದ ಪ್ರಯೋಜನವನ್ನು ಮುಂದುವರಿಸಿಕೊಂಡು ಹೋಗಲು, ಆಯಾ ಶಾಲೆಗಳಲ್ಲಿ ಆಸಕ್ತ

* ಈ ಮಲ್ಟಿ ಮೀಡಿಯಾ CDಯನ್ನು *RIMSE*, ಯಾದವಗಿರಿ, ಮೈಸೂರು ೫೭೦ ೨೦— ಈ ವಿಳಾಸದ ಮೂಲಕ ಪಡೆಯಬಹುದು. ಬೆಲೆ ರೂ.೫೦೦.೦೦